# ಅಧ್ಯಾಯ-4

# ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ





# ಅಧ್ಯಾಯ–4
## ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

ಯೋಜನೆಯಡಿಯಲ್ಲಿ ಪರಿಣಾಮಕಾರಿತ್ವ, ದಕ್ಷತೆ ಮತ್ತು ದತ್ತಾಂಶ ಸಮಗ್ರತೆಯ ಉದ್ದೇಶಗಳನ್ನು ಎಷ್ಟರ ಮಟ್ಟಿಗೆ ಸಾಧಿಸಲಾಗುತ್ತದೆ ಎಂಬುದರ ಮೇಲೆ ಮೇಲ್ವಿಚಾರಣೆಯ ಗುಣಮಟ್ಟವು ಪ್ರಮುಖ ಪರಿಣಾಮವನ್ನು ಬೀರುತ್ತದೆ.

### 4.1 ಡಿಬಿಟಿ ಆಡಳಿತ ಚೌಕಟ್ಟು

ಅಧ್ಯಾಯ–1ರಲ್ಲಿ ಈಗಾಗಲೇ ಚರ್ಚಿಸಿದಂತೆ, ರಾಜ್ಯ ಡಿಬಿಟಿ ಕೋಶವು ಡಿಬಿಟಿಯನ್ನು ಅನುಷ್ಠಾನಗೊಳಿಸುವ ಮತ್ತು ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನು ಹೊಂದಿದೆ. ಇದು ಸಲಹಾ ಮಂಡಳಿ ಮತ್ತು ಸಂಚಾಲನ ಸಮಿತಿಯನ್ನು ಒಳಗೊಂಡಿರಬೇಕು ಮತ್ತು ಡಿಬಿಟಿಗೆ ಸಂಬಂಧಿಸಿದ ಎಲ್ಲಾ ಪ್ರಯತ್ನಗಳನ್ನು ಮಂಡಳಿಯಲ್ಲಿ ತರಲು ಮತ್ತು ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಸಮನ್ವಯಗೊಳಿಸಬೇಕು.

#### *4.1.1 ಸಲಹಾ ಸಮಿತಿ ಸಭೆಗಳನ್ನು ನಡೆಸಲಾಗಿಲ್ಲ*

ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಲಹಾ ಮಂಡಳಿಯನ್ನು ರಚಿಸಲಾಯಿತು (2016). ಸಲಹಾ ಮಂಡಳಿಯು 2016ರಿಂದ ಇಲ್ಲಿಯವರೆಗೆ ಯಾವುದೇ ಸಭೆಗಳನ್ನು ನಡೆಸಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ, ರಾಜ್ಯದಲ್ಲಿ ಡಿಬಿಟಿಯ ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

#### *4.1.2 ಸೇರ್ಪಡೆ ಮಾಡಿದ ಯೋಜನೆಗಳ ಮೇಲ್ವಿಚಾರಣೆಯಲ್ಲಿ ಅಸಮರ್ಪಕತೆಗಳು*

ರಾಜ್ಯದಲ್ಲಿ ವಿತರಣಾ ಕಾರ್ಯವಿಧಾನವಾಗಿ ಡಿಬಿಟಿಯನ್ನು ಪರಿಚಯಿಸುವುದರೊಂದಿಗೆ, ಡಿಬಿಟಿ ಹೊರತುಪಡಿಸಿ ಬೇರೆ ವಿಧಾನದ ಮೂಲಕ ನಗದು ವರ್ಗಾವಣೆಯನ್ನು ಸರ್ಕಾರವು ನಿಷೇಧಿಸಿತು. ಅಂತೆಯೇ, ಡಿಬಿಟಿಗೆ ಒಳಪಟ್ಟಿರುವ ಯೋಜನೆಗಳಡಿಯಲ್ಲಿನ ನಗದು ಪ್ರಯೋಜನಗಳನ್ನು ರಾಜ್ಯದ ಕೋರ್ ಡಿಬಿಟಿ ಪೋರ್ಟಲ್ ಮೂಲಕವೇ ರವಾನಿಸಬೇಕಿತ್ತು. ಬಳಕೆದಾರ ವಿಭಾಗಗಳು ಕೋರ್ ಡಿಬಿಟಿ ಮೂಲಕ ಮಾತ್ರವೇ ವಹಿವಾಟುಗಳನ್ನು ನಡೆಸುತ್ತಿದ್ದಾರೆ ಎಂಬುದನ್ನು ಮೇಲ್ವಿಚಾರಣೆ ಮಾಡಲು ಯಾವುದೇ ಕಾರ್ಯವಿಧಾನವಿಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪೋರ್ಟಲ್‌ನಲ್ಲಿ ಸೇರ್ಪಡೆ ಮಾಡಿದ ನಂತರವೂ ಕೋರ್ ಡಿಬಿಟಿಯ ಹೊರಗೆ ವಹಿವಾಟು ನಡೆಸಲಾದ ನಿದರ್ಶನಗಳನ್ನು ಕಂಡಿಕೆಗಳು–3.2.1.1 ಮತ್ತು 3.2.2.1ರಲ್ಲಿ ನೀಡಲಾಗಿದೆ. ಕೋರ್ ಡಿಬಿಟಿಯ ಹೊರಗೆ ವಹಿವಾಟುಗಳನ್ನು ಮಾಡುವುದು ಸರ್ಕಾರದ ನಿರ್ದೇಶನಗಳನ್ನು ಉಲ್ಲಂಘಿಸಿದಂತಾಗುತ್ತದೆ ಮತ್ತು ಕಡ್ಡಾಯವಾದ ಎನ್‌ಪಿಸಿಐ ಮತ್ತು ದ್ವಿಪಾತಿ ತಡೆ ಪರಿಶೀಲನೆಗಳನ್ನು ಕಡೆಗಣಿಸಲು ಕಾರಣವಾಗುತ್ತದೆ ಹಾಗೂ ಅನರ್ಹ ಫಲಾನುಭವಿಗಳು ಪ್ರಯೋಜನಗಳನ್ನು ಪಡೆಯುವ ಅಪಾಯದಿಂದ ಕೂಡಿದೆ. ಅಂತಹ ಪ್ರಕರಣಗಳನ್ನು ಪರಿಶೀಲಿಸಲು ಯಾವುದೇ ಕಾರ್ಯವಿಧಾನವು ಅಸ್ತಿತ್ವದಲ್ಲಿಲ್ಲ ಎಂದು ಡಿಬಿಟಿ ಕೋಶವು ಒಪ್ಪಿಕೊಂಡಿತು.

ಡಿಬಿಟಿ ಪೋರ್ಟಲ್ ಫಲಾನುಭವಿಗೆ ನಗದು ಪಾವತಿಗಳನ್ನು ಮಾತ್ರ ನಿರ್ವಹಿಸುತ್ತದೆ ಮತ್ತು ಇತರ ಪಾವತಿಗಳನ್ನು ಡಿಡಿಓಗಳು ನೇರವಾಗಿ ಕೆ2ನಲ್ಲಿ ಮಾಡಬೇಕಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021). ಹಾಗಾಗಿ, ಅಂತಹ ಚಟುವಟಿಕೆಗಳನ್ನು ವಿದ್ಯುನ್ಮಾನವಾಗಿ ನಿಯಂತ್ರಿಸುವುದು

ತುಂಬಾ ಕಷ್ಟಸಾಧ್ಯವಾದರೂ ಅಂತಹ ಲೋಪಗಳಿಗೆ ಡಿಡಿಒಗಳನ್ನು ಹೊಣೆಗಾರರನ್ನಾಗಿ ಮಾಡಿ ಆರ್ಥಿಕ ಇಲಾಖೆ ನಿರ್ದೇಶನಗಳನ್ನು ಹೊರಡಿಸಿದೆ ಎಂದೂ ಸಹ ಸರ್ಕಾರವು ತಿಳಿಸಿತು.

### *4.1.3 ಡಿಬಿಟಿ ಕೋಶದಿಂದ ಅಸಮರ್ಪಕ ಮೇಲ್ವಿಚಾರಣೆ*

ಯೋಜನೆಯ ಅನುಷ್ಠಾನದ ಪರಿಣಾಮಕಾರಿತ್ವವನ್ನು, ಯೋಜನೆಗೆ ನಿಗದಿಪಡಿಸಿದ ಗುರಿಯೊಂದಿಗೆ ಹೋಲಿಸಿ, ಫಲಿತಾಂಶಗಳ ಪರಿಭಾಷೆಯಲ್ಲಿ ಅಳೆಯಲಾಗುತ್ತದೆ. ಡಿಬಿಟಿ ಕೋಶದ ಕಾರ್ಯಾಚರಣೆ ಗುಂಪು ಡಿಬಿಟಿ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು/ಇಲಾಖೆಗಳನ್ನು ಗುರುತಿಸಲು, ಯೋಜನೆಗಳ ಸೇರ್ಪಡೆಗೆ ಗುರಿಗಳು ಮತ್ತು ಕಾಲಮಿತಿಯನ್ನು ನಿರ್ಧರಿಸಲು ಮತ್ತು ಪ್ರತಿ ಇಲಾಖೆಯ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವ ಅಗತ್ಯವಿತ್ತು. ಸೇರ್ಪಡೆಗಾಗಿ 239 ಯೋಜನೆಗಳನ್ನು ಗುರುತಿಸಲಾಗಿದ್ದರೂ, ಕೋರ್ ಡಿಬಿಟಿ ಪೋರ್ಟಲ್‌ನಲ್ಲಿ ಅವುಗಳನ್ನು ಸೇರ್ಪಡೆ ಮಾಡಲು ಡಿಬಿಟಿ ಕೋಶದಿಂದ ಯಾವುದೇ ಗುರಿಗಳು ಮತ್ತು ಕಾಲಮಿತಿಯನ್ನು ಸೂಚಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ, ಈ ನಿಟ್ಟಿನಲ್ಲಿ ಬಳಕೆದಾರ ಇಲಾಖೆಯ ಪ್ರಗತಿಯ ಮೇಲೆ ಯಾವುದೇ ಮೇಲ್ವಿಚಾರಣೆ ಇರಲಿಲ್ಲ.

ಯೋಜನೆಗಳನ್ನು ಸೇರ್ಪಡೆ ಮಾಡಲು ಸರ್ಕಾರವು ಗುರಿಗಳನ್ನು ನಿಗದಿಪಡಿಸಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021). ಸರ್ಕಾರವು ನಿಗದಿಪಡಿಸಿದ ಗಡುವಿನಿಂದ ಸುಮಾರು ಎರಡು ವರ್ಷಗಳ ಕಾಲ ಗತಿಸಿದ್ದರೂ, ಏಪ್ರಿಲ್ 2021ರಲ್ಲಿದ್ದಂತೆ, ಗುರುತಿಸಲಾದ ಯೋಜನೆಗಳಲ್ಲಿ ಕೇವಲ ಶೇಕಡಾ 35ರಷ್ಟನ್ನು ಮಾತ್ರ ಸೇರ್ಪಡೆ ಮಾಡಲಾಗಿತ್ತು ಎಂಬುದು ವಾಸ್ತವಾಂಶವಾಗಿದೆ. ಇದು ಡಿಬಿಟಿ ಕೋಶದ ಮೇಲ್ವಿಚಾರಣೆಯ ಅನುಪಸ್ಥಿತಿಯನ್ನು ಸೂಚಿಸುತ್ತದೆ.

### *4.1.4 ಫಲಾನುಭವಿ ಕುಂದುಕೊರತೆ ಪರಿಹಾರ ವ್ಯವಸ್ಥೆ*

ಡಿಬಿಟಿ ಭಾರತ್ ಮಾರ್ಗಸೂಚಿಗಳ ಪ್ರಕಾರ, ಫಲಾನುಭವಿಗಳ ಪ್ರತಿಕ್ರಿಯೆ, ಡಿಬಿಟಿಯೊಂದಿಗಿನ ಅವರ ಅನುಭವ ಮತ್ತು ಅವರ ಕುಂದುಕೊರತೆಗಳನ್ನು ವ್ಯವಸ್ಥೆಯಲ್ಲಿ ಅಳವಡಿಸಲು ಸಾಧ್ಯವಾಗುವಂತಹ ಸದೃಢ ಕುಂದುಕೊರತೆ ಪರಿಹಾರ ವ್ಯವಸ್ಥೆಯ ಅವಶ್ಯಕತೆಯಿದೆ. ನಿರಂತರ ಕಲಿಕೆ ಮತ್ತು ಸುಧಾರಣೆಯ ಪ್ರಕ್ರಿಯೆಯ ಮೂಲಕ ಈ ರೀತಿಯ ದ್ವಿಮುಖ ಪ್ರತಿಕ್ರಿಯೆ ವಿಧಾನ ಡಿಬಿಟಿ ಚೌಕಟ್ಟನ್ನು ಬಲಪಡಿಸುತ್ತದೆ. ಇದಲ್ಲದೆ, ಡಿಬಿಟಿ ಭಾರತ್‌ನ ಸೂಚಿತ ಕಾರ್ಯಾಚರಣೆ ವಿಧಾನವು ಡಿಬಿಟಿ ಕೋಶ ಫಲಾನುಭವಿಗಳ ದೂರುಗಳು ಮತ್ತು ಕುಂದುಕೊರತೆಗಳನ್ನು ನ್ಯಾಯಯುತ ಮತ್ತು ಸಮಯೋಚಿತವಾಗಿ ವ್ಯವಹರಿಸಲು ಪ್ರತ್ಯೇಕ ವ್ಯವಸ್ಥೆಯನ್ನು ರಚಿಸಬೇಕು ಎಂದು ನಿಗದಿಪಡಿಸುತ್ತದೆ.

ಫಲಾನುಭವಿಗಳಿಗೆ ಅವರ ಕುಂದುಕೊರತೆಗಳ ಪರಿಹಾರಕ್ಕೆ ಸಹಾಯ ಮಾಡಲು ಕೇಂದ್ರೀಕೃತ ಸಾರ್ವಜನಿಕ ಕುಂದುಕೊರತೆ ನಿರ್ವಹಣಾ ಕಾರ್ಯವಿಧಾನವನ್ನು ಸ್ಥಾಪಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪ್ರಸ್ತುತ ಫಲಾನುಭವಿಗಳು ಡಿಬಿಟಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ನಿರ್ದಿಷ್ಟ ಇಲಾಖೆಯಲ್ಲಿ ತಮ್ಮ ಕುಂದುಕೊರತೆಗಳನ್ನು ವೈಯಕ್ತಿಕವಾಗಿ ತಿಳಿಸಬೇಕಿದೆ. ಇದಲ್ಲದೆ, ಒಬ್ಬ ಫಲಾನುಭವಿಯು ಒಂದಕ್ಕಿಂತ ಹೆಚ್ಚು ಪ್ರಯೋಜನಗಳ ಸ್ವೀಕೃತಿಗೆ ಅರ್ಹರಾಗಿರಬಹುದಾದರೂ ವಾಸ್ತವವಾಗಿ ಪ್ರಯೋಜನಗಳನ್ನು ಪಡೆಯುತ್ತಿರುವುದಿಲ್ಲ ಮತ್ತು ಅದಕ್ಕೆ ಅವನು/ಅವಳು ಅರ್ಹವಾಗಿರುವ ಯೋಜನೆಗಳಾದ್ಯಂತ ಕಾರಣವು ಒಂದೇ ಆಗಿರಬಹುದು. ಒಂದೇ ಕಾರಣಕ್ಕೆ ಫಲಾನುಭವಿಗಳು ತಮ್ಮ ದೂರುಗಳನ್ನು ಎಲ್ಲ ಇಲಾಖೆಗಳಲ್ಲಿಯೂ ದಾಖಲಿಸಬೇಕಾಗಿರುವುದರಿಂದ ಕುಂದುಕೊರತೆ ನಿವಾರಣೆಗೆ ತೊಡಕಾಗಿದೆ. ನಗದು ವರ್ಗಾವಣೆ ಪ್ರಕ್ರಿಯೆಗಳ ವಿವಿಧ ಹಂತಗಳಲ್ಲಿನ ಸಮಸ್ಯೆಗಳನ್ನು ಪರಿಗಣಿಸಿ, ಕೇಂದ್ರೀಕೃತ ಫಲಾನುಭವಿಗಳ ಕುಂದುಕೊರತೆ ಕಾರ್ಯವಿಧಾನದಿಂದ ಫಲಾನುಭವಿಗಳು ತಮ್ಮ ಕುಂದುಕೊರತೆಗಳಿಗೆ ಪರಿಹಾರವನ್ನು ಪಡೆಯುವ ವ್ಯವಸ್ಥೆಯನ್ನು ಸ್ಥಾಪಿಸುವುದು ಅತ್ಯಗತ್ಯವಾಗಿದೆ. ಈ ಹಿಂದೆ ಚರ್ಚಿಸಿದಂತೆ, ಹೆಚ್ಚಿನ

ಸಂಖ್ಯೆಯ ವಿಫಲ/ಬಾಕಿ ಉಳಿದಿರುವ/ತಿರಸ್ಕೃತ ವಹಿವಾಟುಗಳು ಮತ್ತು ತಪ್ಪಾದ ಖಾತೆಗಳಿಗೆ ಜಮೆಯಾಗುವ ದೃಷ್ಟಿಯಿಂದ ಇದು ಮಹತ್ವವನ್ನು ಪಡೆದುಕೊಳ್ಳುತ್ತದೆ.

ಮೊಬೈಲ್ ಅಪ್ಲಿಕೇಶನ್ ಮೂಲಕ ಪಾವತಿಗಳ ವಾಸ್ತವ ಸ್ಥಿತಿಯನ್ನು ಫಲಾನುಭವಿಗಳಿಗೆ ತಿಳಿಸುವ ಸೌಲಭ್ಯವು ಈಗಾಗಲೇ ಲಭ್ಯವಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021). ಫಲಾನುಭವಿಗಳಿಗೆ ಪಾವತಿ ಸ್ಥಿತಿಯನ್ನು ತಿಳಿಯಲು ಮೊಬೈಲ್ ಅಪ್ಲಿಕೇಶನ್ ಸೂಕ್ತವಾಗಿದ್ದರೂ, ದೂರುಗಳು/ಕುಂದುಕೊರತೆಗಳನ್ನು ನೋಂದಾಯಿಸಲು ಯಾವುದೇ ಕಾರ್ಯವಿಧಾನವಿರಲಿಲ್ಲ.

## 4.2 ಡಿಬಿಟಿಯ ಮೌಲ್ಯಮಾಪನ

ಸರ್ಕಾರದಿಂದ ಜನರಿಗೆ (ಜಿ2ಪಿ) ಎಂಬ ಸರಳ ಮತ್ತು ಬಳಕೆದಾರ ಸ್ನೇಹಿ ಅಂತರಸಂಪರ್ಕ ಸಾಧನವನ್ನು ಒದಗಿಸುವ ಮತ್ತು ಅರ್ಹ ವ್ಯಕ್ತಿಗಳು ಮತ್ತು ಕುಟುಂಬಗಳಿಗೆ ನೇರವಾಗಿ ನಗದನ್ನು ನ್ಯಾಯಯುತ, ಪಾರದರ್ಶಕ, ದಕ್ಷ ಮತ್ತು ವಿಶ್ವಾಸಾರ್ಹ ರೀತಿಯಲ್ಲಿ ತಲುಪಿಸಲು ಡಿಬಿಟಿ ಯೋಜನೆಯನ್ನು ಪ್ರಾರಂಭಿಸಲಾಯಿತು. ಉದ್ದೇಶಿತ ಫಲಾನುಭವಿಗಳ ನಿಖರವಾದ ಗುರುತಿಸುವಿಕೆ ಮತ್ತು ಗುರಿ, ಮಾಹಿತಿ ಮತ್ತು ನಿಧಿಗಳ ಸರಳ ಹರಿವಿಗಾಗಿ ಸರ್ಕಾರಿ ಪ್ರಕ್ರಿಯೆಗಳ ಪುನರ್‌ವ್ಯವಸ್ಥಾಕ್ರಿಯೆ ಕೈಗೊಳ್ಳುವುದು, ಆರ್ಥಿಕ ಉತ್ತೇಜನ ಹಾಗೂ ಸರ್ಕಾರ ಮತ್ತು ಫಲಾನುಭವಿಗಳ ನಡುವೆ ಕೈಗೆಟಕುವಂತಹ, ಮಾಪನ ಮಾಡಬಹುದಾದಂತಹ ಮತ್ತು ವಿಶ್ವಾಸಾರ್ಹ ಬಳಕೆದಾರ ಸ್ನೇಹಿ ಅಂತರ್‌ಸಂಪರ್ಕಗಳನ್ನು ಒದಗಿಸಿ ಡಿಜಿಟಲ್ ವ್ಯವಸ್ಥೆಯ ಸ್ಥಾಪನೆಯ ಮೂಲಕ ಎಲ್ಲಾ ಅರ್ಹ ಫಲಾನುಭವಿಗಳಿಗೆ ಪ್ರಯೋಜನಗಳನ್ನು ತಲುಪಿಸುವ ಪ್ರಕ್ರಿಯೆಯಲ್ಲಿ ಗಮನಾರ್ಹ ಬದಲಾವಣೆಯನ್ನು ತರಲು ಇದು ಉದ್ದೇಶಿಸಿತ್ತು.

ಸೇವೆಗಳ ಸಮಯೋಚಿತ ವಿತರಣೆ, ಅರ್ಹ ಫಲಾನುಭವಿಗಳ ನಿಖರ ಗುರುತಿಸುವಿಕೆ ಇತ್ಯಾದಿ ಉದ್ದೇಶಗಳ ಮೇಲೆ ಈ ಗಮನಾರ್ಹ ಬದಲಾವಣೆಯ ಅಥವಾ ಪರಿಣಾಮದ ಮೌಲ್ಯಮಾಪನವನ್ನು ರಾಜ್ಯ ಸರ್ಕಾರವು ಇನ್ನೂ ಕೈಗೊಳ್ಳಬೇಕಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಮೂರನೇ ವ್ಯಕ್ತಿಯ ಮೂಲಕ ಮೌಲ್ಯಮಾಪನ ಮತ್ತು ಪರಿಣಾಮಕಾರಿತ್ವವನ್ನು ಅರಿಯಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2022).

## 4.3 ಹಾಲು ಪ್ರೋತ್ಸಾಹಧನ ಯೋಜನೆ

### *4.3.1 ಡಿಬಿಟಿ ಕೋಶದ/ಸಮಿತಿಯ ಅನುಪಸ್ಥಿತಿ*

ಯೋಜನೆಗಳ ಅನುಷ್ಠಾನದಲ್ಲಿ ಡಿಬಿಟಿ ಕಾರ್ಯಚೌಕಟ್ಟನ್ನು ಅಳವಡಿಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಡಿಬಿಟಿ ಕೋಶ/ಸಮಿತಿ ರಚಿಸುವುದನ್ನು ಡಿಬಿಟಿ ಮೇಲಿನ ರಾಜ್ಯ ಶಿಷ್ಟಾಚಾರ ದಾಖಲೆಯು ಸಲಹೆ ಮಾಡಿತ್ತು. ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ ಇಲಾಖೆಯು ಡಿಬಿಟಿ ಕೋಶವನ್ನು ಸ್ಥಾಪಿಸಿರಲಿಲ್ಲ, ಹಾಗಾಗಿ ಇದು ಯೋಜನೆಯ ಅನುಷ್ಠಾನದಲ್ಲಿ ನ್ಯೂನತೆಗಳನ್ನು ಉಂಟುಮಾಡಿತು. ಇಲಾಖೆಯೊಳಗೆ (ವಿಶೇಷವಾಗಿ ಸಂಘಗಳು ಮತ್ತು ಶಿಬಿರ ಮಟ್ಟದಲ್ಲಿ) ಪ್ರಸ್ತುತ ಡಿಬಿಟಿ ಸಂಬಂಧಿತ ಚಟುವಟಿಕೆಗಳಲ್ಲಿ ವ್ಯವಹರಿಸುತ್ತಿರುವ ಸಿಬ್ಬಂದಿಗಳು ನ್ಯೂನತೆಗಳನ್ನು ಸೂಕ್ತವಾಗಿ ನಿವಾರಿಸಲು ಹೊಂದಿರಬೇಕಾದ ಅಗತ್ಯ ಕೌಶಲ್ಯಗಳನ್ನು ಅಂದಾಜಿಸಿರಲಿಲ್ಲ ಮತ್ತು ಅಂತಹ ನ್ಯೂನತೆಗಳನ್ನು ಪರಿಹರಿಸಲು ಯಾವುದೇ ತರಬೇತಿ ನೀಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ರಾಜ್ಯ ಸರ್ಕಾರವು (ಡಿಸೆಂಬರ್ 2021) ಡಿಬಿಟಿ ಕೋಶ/ಸಮಿತಿಯ ರಚನೆಯನ್ನು ಪರಿಗಣಿಸಲಾಗುವುದು ಎಂದು ಹೇಳಿತು.

### *4.3.2 ಅಸಮರ್ಪಕ ಮೇಲ್ವಿಚಾರಣಾ ಕಾರ್ಯವಿಧಾನ*

ಈ ಮೊದಲೇ ಚರ್ಚಿಸಿದಂತೆ, ಡಿಬಿಟಿ ವಹಿವಾಟುಗಳು ವಿಫಲವಾದ, ತಿರಸ್ಕರಿಸಿದ, ಬಾಕಿ ಉಳಿದಿರುವ ಅಥವಾ ತಪ್ಪಾದ ಖಾತೆಗೆ ಜಮೆಯಾಗಿರುವ ಹಲವಾರು ನಿದರ್ಶನಗಳಿವೆ. ಈ ವಹಿವಾಟುಗಳಿಗೆ ಸಮಯೋಚಿತ ಸರಿಪಡಿಸುವ ಕ್ರಮದ ಅಗತ್ಯವಿದೆ ಮತ್ತು ಹಾಗಾಗಿ, ದೋಷಗಳನ್ನು ಗುರುತಿಸಲು ಮತ್ತು ಘಟನೆಗಳನ್ನು ವಿಶ್ಲೇಷಣೆಗಾಗಿ ದಾಖಲಿಸಲು ಮತ್ತು ಸರಿಪಡಿಸುವಿಕೆ ಅಥವಾ ತಿದ್ದುಪಡಿಗಾಗಿ ಸಂಬಂದಿತ ಅಧಿಕಾರಿಗಳಿಗೆ ವರದಿ ಮಾಡಲು ಘಟನೆ ವರದಿ ಮಾಡುವ ವ್ಯವಸ್ಥೆಯನ್ನು ಹೊಂದಿರುವುದು ಕಡ್ಡಾಯವಾಗಿದೆ. ಅಗತ್ಯವಿದ್ದಲ್ಲಿ, ಪ್ರಮುಖ ನಿರ್ಧಾರ ಮತ್ತು ಪರಿಹಾರಕ ಕ್ರಮಗಳಿಗಾಗಿ ಮೇಲ್ವಿಚಾರಣೆ ಚಟುವಟಿಕೆಗಳ ಫಲಿತಾಂಶಗಳನ್ನು ನಿಯತಕಾಲಿಕವಾಗಿ ನಿರ್ವಹಣಾ ತಂಡಕ್ಕೆ ವರದಿ ಮಾಡಬೇಕು.

ಇಲಾಖೆಯಲ್ಲಿ ಇಂತಹ ಘಟನೆ ವರದಿ ಮಾಡುವ ಯಾವುದೇ ವ್ಯವಸ್ಥೆ ಇರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆ ಗಮನಿಸಿತು. ವಿಫಲವಾದ/ತಿರಸ್ಕರಿಸಿದ/ಬಾಕಿ ಉಳಿದಿರುವ ವಹಿವಾಟುಗಳಿಗೆ ಸಂಬಂಧಿಸಿದಂತೆ ಪರಿಹಾರ ಕೈಗೊಳ್ಳಲು ಇಲಾಖೆಯು ಯಾವುದೇ ಸಮಯಾವಧಿಯನ್ನು ನಿಗದಿಪಡಿಸಿಲ್ಲ, ಇದು, ಸೇವೆಗಳ ವಿಳಂಬ ವಿತರಣೆಯಲ್ಲಿ ಅಥವಾ ಸೇವೆಗಳ ವಿತರಣೆ ಆಗದೇ ಇರುವಲ್ಲಿ ಪರಿಣಮಿಸಿದೆ.

ವಿಫಲವಾದ ದಾಖಲೆಗಳು ಮತ್ತು ಪಾವತಿ ಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ವ್ಯವಸ್ಥೆ ಅಸ್ತಿತ್ವದಲ್ಲಿದೆ ಎಂದು ರಾಜ್ಯ ಸರ್ಕಾರವು (ಡಿಸೆಂಬರ್ 2021) ಹೇಳಿತು. ಸಮಯಾವಧಿ ನಿಗದಿಪಡಿಸಲಾಗುವುದು ಮತ್ತು ಕಾಲಮಿತಿಯೊಳಗೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ನಿರ್ದೇಶನಗಳನ್ನು ನೀಡಲಾಗುವುದು ಎಂದೂ ಅದು ಹೇಳಿದೆ. ಲೆಕ್ಕಪರಿಶೋಧನಾ ಅವಧಿಯಲ್ಲಿ ಯಾವುದೇ ವಿಫಲ ಪಾವತಿಯನ್ನು ಮರು-ಪ್ರಕ್ರಿಯೆಗೊಳಿಸಿರದೇ ಇರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿದ ಕಾರಣ ಉತ್ತರವು ಸ್ವೀಕಾರಾರ್ಹವಲ್ಲ. ಇದಲ್ಲದೆ, ಪಾವತಿ ಫೈಲ್‌ಗಳ ತಯಾರಿಕೆಯಲ್ಲಿ ವಿಳಂಬಗಳು, ಕೋರ್ ಡಿಬಿಟಿ ಮತ್ತು ಕೆ2ವಿನಲ್ಲಿ ಡಿಡಿಒ ಅನುಮೋದನೆಯಲ್ಲಿ ವಿಳಂಬಗಳು, ಕೆ2 ಮಟ್ಟದಲ್ಲಿ ತಿರಸ್ಕರಿಸಿದ ಪ್ರಕರಣಗಳು, ಕೋರ್ ಡಿಬಿಟಿ ಪೋರ್ಟಲ್‌ನಲ್ಲಿ ಪಾವತಿ ಫೈಲ್‌ಗಳ ವೈಫಲ್ಯವು ಮೇಲ್ವಿಚಾರಣಾ ಕಾರ್ಯವಿಧಾನದಲ್ಲಿನ ನ್ಯೂನತೆಗಳನ್ನು ಸೂಚಿಸುತ್ತದೆ.

### *4.3.3 ಕಾರ್ಯಕ್ಷಮತೆ ಸೂಚಕಗಳನ್ನು ನಿರ್ದಿಷ್ಟಪಡಿಸಲಾಗಿಲ್ಲ*

ಡಿಬಿಟಿ ಯೋಜನೆಯು ಫಲಾನುಭವಿ ಕೇಂದ್ರಿತವಾಗಿರುವುದರಿಂದ, ಯೋಜನೆಗಳ ಅಡಿಯಲ್ಲಿ ಡಿಬಿಟಿಯ ಫಲಿತಾಂಶಗಳಿಂದ ಮಾಪಕಸಾಧ್ಯ ಉದ್ದೇಶಗಳು ಮತ್ತು ಪರಿಣಾಮಗಳನ್ನು ನಿರ್ಧರಿಸಬೇಕು, ಸೂಕ್ತವಾಗಿ ಗುರಿಗಳನ್ನು ನಿಗದಿಪಡಿಸಬೇಕು, ಗುರಿಗಳಿಗೆ ಪ್ರತಿಯಾಗಿ ಪರಿಣಾಮಗಳನ್ನು ನಿರ್ಣಯಿಸಬೇಕು ಮತ್ತು ಯಾವುದೇ ಮಾರ್ಗಪಲ್ಲಟಗಳ ಬಗ್ಗೆ ಕ್ರಮ ಕೈಗೊಳ್ಳಬೇಕು. ಯೋಜನೆಯ ಉದ್ದೇಶಗಳ ದೃಷ್ಟಿಯಲ್ಲಿ ಕಾರ್ಯಕ್ಷಮತೆ ಸೂಚಕಗಳಿಗೆ ಪ್ರತಿಯಾಗಿನ ಸಾಧನೆಗಳು ಒಟ್ಟಾರೆ ಯೋಜನೆಯ ಫಲಿತಾಂಶವನ್ನು ಸೂಚಿಸುತ್ತವೆ.

ಇಲಾಖೆಯು ಯೋಜನೆಯ ವಿವಿಧ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು ಯಾವುದೇ ಕಾರ್ಯಕ್ಷಮತೆ ಸೂಚಕಗಳನ್ನು ಅಭಿವೃದ್ಧಿಪಡಿಸಿಲ್ಲ ಅಥವಾ ಅಳವಡಿಸಿಕೊಂಡಿಲ್ಲ ಅಥವಾ ಅನುಷ್ಠಾನದ ಹಂತದಲ್ಲಿ ಯೋಜನೆಯ ಯಾವುದೇ ಮೌಲ್ಯಮಾಪನವನ್ನು ನಡೆಸಿಲ್ಲ.

ಇಲಾಖೆಯು ವಿವಿಧ ಹಂತಗಳಲ್ಲಿ ಯೋಜನೆಯನ್ನು ಮೇಲ್ವಿಚಾರಣೆ ಮಾಡುತ್ತಿದೆಯಾದರೂ ಔಪಚಾರಿಕವಾಗಿ ಯಾವುದೇ ಕಾರ್ಯಕ್ಷಮತೆ ಸೂಚಕಗಳನ್ನು ನಿಗದಿಪಡಿಸಿಲ್ಲ ಎಂದು ಸರ್ಕಾರವು (ಜನವರಿ 2022) ಹೇಳಿತು. ಕಾರ್ಯಕ್ಷಮತೆ ಸೂಚಕವನ್ನು ನಿಗದಿಪಡಿಸಲು ಮತ್ತು

ಯೋಜನೆಯಡಿಯಲ್ಲಿ ಸಾಧನೆಗಳನ್ನು ಮೇಲ್ವಿಚಾರಣೆ ಮಾಡಲು ನಿರ್ದೇಶನಗಳನ್ನು ನೀಡಲಾಗುವುದು ಎಂದೂ ಹೇಳಿತು.

### *4.3.4 ಯೋಜನೆಯ ಮೌಲ್ಯಮಾಪನವನ್ನು ಕೈಗೊಳ್ಳಲಾಗಿಲ್ಲ*

ಮೌಲ್ಯಮಾಪನವು ಗುಣಮಟ್ಟದ ವಿಶ್ವಾಸಾರ್ಹತೆಯ ಕಾರ್ಯವಿಧಾನವಾಗಿದ್ದು, ಅದರ ಪ್ರಸ್ತುತತೆ, ದಕ್ಷತೆ, ಪರಿಣಾಮಕಾರಿತ್ವ, ಪ್ರಭಾವ ಮತ್ತು ಸಮರ್ಥನೀಯತೆಯನ್ನು ನಿರ್ಧರಿಸಲು ಯೋಜಿತ, ಕಾರ್ಯಗತಗೊಳ್ಳುತ್ತಿರುವ ಅಥವಾ ಪೂರ್ಣಗೊಂಡ ಕಾರ್ಯಕ್ರಮದ ಮೌಲ್ಯಮಾಪನವನ್ನು ಒಳಗೊಂಡಿರುತ್ತದೆ.

ಹಾಲು ಪ್ರೋತ್ಸಾಹಧನ ಯೋಜನೆಯನ್ನು ಸೆಪ್ಟೆಂಬರ್ 2008ರಿಂದ ಜಾರಿಗೆ ತರಲಾಯಿತು ಮತ್ತು ಏಪ್ರಿಲ್ 2019ರಿಂದ ಡಿಬಿಟಿ ಪೋರ್ಟಲ್‌ಗೆ ಸೇರ್ಪಡೆ ಮಾಡಲಾಗಿದ್ದರೂ, ಕೋರ್ ಡಿಬಿಟಿಗೆ ಸೇರಿಸಿದ ನಂತರದ ಅವಧಿಯಲ್ಲಿನ ಪರಿಣಾಮಕಾರಿತ್ವ ಮತ್ತು ದಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಇಲಾಖೆಯು ಯೋಜನೆಯ ಅನುಷ್ಠಾನದ ಯಾವುದೇ ಮೌಲ್ಯಮಾಪನವನ್ನು ನಡೆಸಿಲ್ಲ.

ರಾಜ್ಯ ಸರ್ಕಾರವು (ಡಿಸೆಂಬರ್ 2021) ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯು ಹಾಲು ಪ್ರೋತ್ಸಾಹಧನ ಯೋಜನೆಯನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಿಂದ ಸಂಪೂರ್ಣವಾಗಿ ಮೌಲ್ಯಮಾಪನ ಮಾಡಿಸಲು ಯೋಜಿಸುತ್ತಿದೆ ಎಂದು ಹೇಳಿತು.

### *4.3.5 ಪ್ರತ್ಯೇಕ ಕುಂದುಕೊರತೆ ಪರಿಹಾರ ವ್ಯವಸ್ಥೆಯ ಅನುಪಸ್ಥಿತಿ*

ಪರಿಣಾಮಕಾರಿ ಕುಂದುಕೊರತೆ ನಿವಾರಣಾ ವ್ಯವಸ್ಥೆಯು ಯೋಜನೆಯ ಪ್ರಯೋಜನಗಳ ಸಮಾನ ಮತ್ತು ನ್ಯಾಯೋಚಿತ ವಿತರಣೆಯನ್ನು ಖಚಿತಪಡಿಸುತ್ತದೆ, ಫಲಾನುಭವಿಗಳಿಗೆ ಮಾಹಿತಿಯ ಲಭ್ಯತೆ ಒದಗಿಸುವ ಮೂಲಕ ಅವರ ಶ್ರಮವನ್ನು ತಗ್ಗಿಸುತ್ತದೆ ಮತ್ತು ಸೂಕ್ತವಾದ ಪರಿಹಾರಕ ಮತ್ತು ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳಲು ಇಲಾಖೆಯನ್ನು ಪ್ರೇರೇಪಿಸುತ್ತದೆ.

ಕುಂದುಕೊರತೆಗಳನ್ನು ಪರಿಹರಿಸಲು ಮತ್ತು ಫಲಾನುಭವಿಗಳಿಂದ ಪ್ರತಿಕ್ರಿಯೆಯನ್ನು ಪಡೆಯಲು ಇಲಾಖೆಯೊಳಗೆ ಪ್ರತ್ಯೇಕ ಕುಂದುಕೊರತೆ ಪರಿಹಾರ ವ್ಯವಸ್ಥೆ ಇಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದರ ಪರಿಣಾಮವಾಗಿ, ಮೆಚ್ಚುಗೆ ಮತ್ತು ವಿಮರ್ಶಾತ್ಮಕತೆಗಾಗಿ ಡಿಬಿಟಿಯ ಅನುಷ್ಠಾನದ ನಂತರದ ನಗದು ವರ್ಗಾವಣೆಗಳ ಪರಿಣಾಮವನ್ನು ನಿರ್ಣಯಿಸಲು ಇಲಾಖೆಗೆ ಸಾಧ್ಯವಾಗಲಿಲ್ಲ

ರಾಜ್ಯ ಸರ್ಕಾರವು (ಡಿಸೆಂಬರ್ 2021) ಈಗ ಸಹಾಯವಾಣಿಯನ್ನು ಸ್ಥಾಪಿಸಲಾಗಿದೆ ಮತ್ತು ಅದರ ಮೂಲಕ ಫಲಾನುಭವಿಗಳ ಕುಂದುಕೊರತೆಗಳನ್ನು ಪರಿಹರಿಸಲಾಗುತ್ತಿದೆ ಎಂದು ಹೇಳಿತಾದರೂ ಅದರ ಬಗೆಗಿನ ಪುರಾವೆಗಳನ್ನು ಒದಗಿಸಲಿಲ್ಲ.

## 4.4 ಕೃಷಿ ಇಲಾಖೆಯ ಯೋಜನೆಗಳು

### *4.4.1 ಎನ್‌ಎಫ್‌ಎಸ್‌ಎಮ್ ಮತ್ತು ರೈತಸಿರಿ ಯೋಜನೆಗಳ ಅಡಿಯಲ್ಲಿ ದತ್ತಾಂಶ ವರ್ಗಾವಣೆ*

ಕೃಷಿ ಇಲಾಖೆಯು ಈ ಯೋಜನೆಗಳ ಅಡಿಯಲ್ಲಿ 2019–20ರವರೆಗೆ ಕೆಎಸ್‌ಆರ್‌ಎಸಿ ಮೂಲಕ ಯೋಜನೆಯ ಪ್ರಯೋಜನಗಳನ್ನು ಪ್ರಕ್ರಿಯೆಗೊಳಿಸಿತು ಮತ್ತು 2020–21ರಿಂದ ಕೆ–ಕಿಸಾನ್ ಪೋರ್ಟಲ್‌ಗೆ ಬದಲಾಯಿಸಿತು. ಆದಾಗ್ಯೂ, ಕೆಎಸ್‌ಆರ್‌ಎಸಿನಲ್ಲಿ ಲಭ್ಯವಿರುವ ದತ್ತಾಂಶವನ್ನು ಕೆ–ಕಿಸಾನ್ ಪೋರ್ಟಲ್‌ಗೆ ವರ್ಗಾಯಿಸಲಿಲ್ಲ. ಇದು ಇಲಾಖೆಯಲ್ಲಿ ಪರಂಪರಾಗತ/ಹಿಂದಿನ ವರ್ಷಗಳ ದತ್ತಾಂಶದ ಅನುಪಸ್ಥಿತಿಯಲ್ಲಿ ಪರಿಣಮಿಸಿತು. ಇಲಾಖೆಯ ಬಳಕೆದಾರರಿಗೆ ಕೆಎಸ್‌ಆರ್‌ಎಸಿನಲ್ಲಿ ದತ್ತಾಂಶಕ್ಕೆ ಲಾಗಿನ್ ಪ್ರವೇಶವನ್ನು ನಿಷ್ಕ್ರಿಯಗೊಳಿಸಲಾಯಿತು, ಆದ್ದರಿಂದ ಇಲಾಖೆಗೆ ತಮ್ಮದೇ ಆದ ದತ್ತಾಂಶ ಲಭ್ಯವಿಲ್ಲವಾಯಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪರಂಪರಾಗತ

ದತ್ತಾಂಶದ ಅನುಪಸ್ಥಿತಿಯು ಮಂಜೂರಾತಿ ಮಟ್ಟ ಮತ್ತು ಮೂಲ ಮಟ್ಟ ಎರಡೂ ಕಡೆಗಳಲ್ಲಿ ಹಾಗೂ ಯೋಜನೆಗಳ ಅನುಷ್ಠಾನದ ಪರಿಣಾಮಕಾರಿ ಮೇಲ್ವಿಚಾರಣೆಯಲ್ಲಿ ನಿರ್ಧಾರ ತೆಗೆದುಕೊಳ್ಳುವುದನ್ನು ನಿರ್ಬಂಧಿಸಿದಂತಾಯಿತು..

ಸಾಫ್ಟ್‌ವೇರ್ ರಚನೆ ಹಾಗೂ ದತ್ತಾಂಶದ ಶೇಖರಣಾ ಮಾದರಿಯನ್ನು ಅಧ್ಯಯನ ಮಾಡಲಾಗುವುದು ಮತ್ತು ಪರಂಪರಾಗತ ದತ್ತಾಂಶವನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಕೆ-ಕಿಸಾನ್ ಪೋರ್ಟಲ್‌ಗೆ ಹೊಂದಿಸಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021).

### *4.4.2 ತಾಂತ್ರಿಕ ಪಾಲುದಾರರೊಂದಿಗೆ ಪರಸ್ಪರ ತಿಳುವಳಿಕೆ ಪತ್ರ ಇಲ್ಲದಿರುವುದು*

ಸಂಸ್ಥೆ ಮತ್ತು ಸೇವಾ ಪೂರೈಕೆದಾರರ ನಡುವಿನ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ವಿವರಿಸುವ ತಾಂತ್ರಿಕ ಮತ್ತು ಇತರ ಅವಶ್ಯಕತೆಗಳ ಪ್ರತಿಯಾಗಿ ಪಾಲುದಾರನನ್ನು ಮೇಲ್ವಿಚಾರಣೆ ಮಾಡಲು ಮತ್ತು ನಿಯಂತ್ರಿಸಲು, ಇಲಾಖೆಯ ಅಗತ್ಯತೆಗಳು ಮತ್ತು ಒಪ್ಪಂದಕ್ಕೆ ಪ್ರತಿಯಾಗಿ ಅಭಿವೃದ್ಧಿಯನ್ನು ಮೇಲ್ವಿಚಾರಣೆ ಮಾಡವಲ್ಲಿ ಒಂದು ಪರಸ್ಪರ ತಿಳುವಳಿಕೆ ಪತ್ರ (ಎಮ್‌ಒಯು) ಆಧಾರವಾಗುತ್ತದೆ. ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಎಮ್‌ಒಯು ಅಗತ್ಯವಿದೆ

ಕೃಷಿ ಇಲಾಖೆಯು ತಾಂತ್ರಿಕ ಪಾಲುದಾರರೊಂದಿಗೆ ಯಾವುದೇ ಎಮ್‌ಒಯು ಅನ್ನು ಕಾರ್ಯಗತಗೊಳಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ, ಲೆಕ್ಕಪರಿಶೋಧನೆಯು ಭದ್ರತಾ ಜವಾಬ್ದಾರಿಗಳನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಎನ್‌ಐಸಿ ಮತ್ತು ಇಲಾಖೆಯ ನಡುವೆ ಎಮ್‌ಒಯು ಕಾರ್ಯಗತಗೊಳಿಸಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021).

### *4.4.3 ಅಸಮರ್ಪಕ ಮೇಲ್ವಿಚಾರಣಾ ವ್ಯವಸ್ಥೆ*

ವಿಫಲವಾದ/ತಿರಸ್ಕರಿಸಿದ/ಬಾಕಿ ಉಳಿದಿರುವ ವಹಿವಾಟುಗಳಿಗೆ ಸಂಬಂಧಿಸಿದಂತೆ ತಿದ್ದುಪಡಿಗಳನ್ನು ಕೈಗೊಳ್ಳಲು ಕೃಷಿ ಇಲಾಖೆಯು ಯಾವುದೇ ಸಮಯಾವಧಿಯನ್ನು ನಿಗದಿಪಡಿಸಿರಲಿಲ್ಲ. ಇಲಾಖೆಯು ಫಲಾನುಭವಿಗಳ ಕುಂದುಕೊರತೆಗಳನ್ನು ಪರಿಹರಿಸಲು ಪ್ರತ್ಯೇಕ ಕುಂದುಕೊರತೆ ಪರಿಹಾರ ವ್ಯವಸ್ಥೆಯನ್ನು ಹೊಂದಿರಲಿಲ್ಲ ಮತ್ತು ಯೋಜನೆಯ ಅನುಷ್ಠಾನದಲ್ಲಿನ ಸುಧಾರಣೆಗಳು ಮತ್ತು ಪರಿಣಾಮಕಾರಿತ್ವವನ್ನು ಖಚಿತಪಡಿಸಿಕೊಳ್ಳಲು ಯೋಜನೆಗಳ ಅನುಷ್ಠಾನದ ನಂತರದ ಯಾವುದೇ ಮೌಲ್ಯಮಾಪನವನ್ನು ನಡೆಸಿರಲಿಲ್ಲ. ಅಲ್ಲದೆ, ಇಲಾಖೆಯು ಮಾಹಿತಿ ತಂತ್ರಜ್ಞಾನ ನೀತಿಗಳು, ಕಾರ್ಯವಿಧಾನಗಳು ಮತ್ತು ವಹಿವಾಟುಗಳನ್ನು ಪ್ರಕ್ರಿಯೆಗೊಳಿಸಲು ಮೇಲ್ವಿಚಾರಣೆಯನ್ನು ಹೊಂದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತಾಂತ್ರಿಕ ಸಮಸ್ಯೆಗಳಿಂದ ಹೆಚ್ಚಿನ ಸಂಖ್ಯೆಯ ವಹಿವಾಟುಗಳು ವಿಫಲವಾಗಿವೆ ಅಥವಾ ತಿರಸ್ಕರಿಸಲ್ಪಟ್ಟಿವೆ ಎಂಬ ಸರ್ಕಾರದ ಉತ್ತರದಿಂದ (ಡಿಸೆಂಬರ್ 2021) ಇದು ಸ್ಪಷ್ಟವಾಗಿದೆ.

ಆಯವ್ಯಯ ಲಭ್ಯತೆಗೆ ಅನುಗುಣವಾಗಿ ಪ್ರಯೋಜನಗಳ ಸಕಾಲಿಕ ವಿತರಣೆಯಾಗಿದೆ, ಫೆಬ್ರವರಿ 2019ರಿಂದ ಪಿಎಮ್-ಕಿಸಾನ್ ಸಹಾಯವಾಣಿಯನ್ನು ಸ್ಥಾಪಿಸಲಾಗಿದೆ, ಯೋಜನೆಗಳ ಮೌಲ್ಯಮಾಪನವನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ವಹಿಸಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021/ಜನವರಿ 2022) ಮತ್ತು ಮುಂದಿನ ದಿನಗಳಲ್ಲಿ ಮಾಹಿತಿ ತಂತ್ರಜ್ಞಾನ ಕಾರ್ಯತಂತ್ರವನ್ನು ಜಾರಿಗೆ ತರುವುದಾಗಿ ಒಪ್ಪಿತು. ವಿಫಲವಾದ, ತಿರಸ್ಕೃತ ಮತ್ತು ಬಾಕಿಯಿರುವ ವಹಿವಾಟುಗಳನ್ನು ಪರಿಹರಿಸುವ ಸಲುವಾಗಿನ ಸಮಯಾವಧಿ ಮತ್ತು ಇತರ ಯೋಜನೆಗಳ ಕುಂದುಕೊರತೆ ಪರಿಹಾರ ವ್ಯವಸ್ಥೆ ಬಗ್ಗೆ ಉತ್ತರವು ಮೌನವಾಗಿದೆ